	ಸ್ಥಾಪಿಸಲು ಇರುವ ಆಡಳಿತಾತ್ಮಕ ತೊಂದರೆಗಳಾವುವು?	
(ಈ)	ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುವುದೇ?	ಕ್ರಮವು ಆಯವ್ಯಯ ಲಭ್ಯತೆಯನ್ನು ಆಧರಿಸಿರುತ್ತದೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೧೯೬೩

ಸದಸ್ಯರ ಹೆಸರು ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ

ಉತ್ತರಿಸುವ ಸಚಿವರು ಶ್ರೀ ಡಾ ಎ ಎಸ್ ಆಚಾರ್ಯ (ವೈದ್ಯಕೀಯ ಶಿಕ್ಷಣ ಸಚಿವರು)

ಕ್ರ ಸಂ	ಪ್ರಶ್ನೆ	ಉತ್ತರ
ಅ)	೨೦೦೫–೦೬, ೨೦೦೬–೦೭ ನೇ ಸಾಲಿನಲ್ಲಿ ರಾಜ್ಯದಲ್ಲಿ ಎಲ್ಲೆಲ್ಲಿ ಹೊಸ ಸರ್ಕಾರಿ ನರ್ಸಿಂಗ್ ಕಾಲೇಜುಗಳನ್ನು ಪ್ರಾರಂಭಿಸಲಾಗಿದೆ , (ವಿವರವಾದ ಮಾಹಿತಿ ನೀಡುವುದು)	೨೦೦೫–೦೬ ನೇ ಸಾಲಿನಲ್ಲಿ – ಒಂದು ಕಾಲೇಜು ೧) ಸರ್ಕಾರಿ ನರ್ಸಿಂಗ್ ಕಾಲೇಜು, ಹುಬ್ಬಳ್ಳಿ ೨೦೦೬–೦೭ ನೇ ಸಾಲಿನಲ್ಲಿ – ಎರಡು ಕಾಲೇಜುಗಳು ೧) ಸರ್ಕಾರಿ ನರ್ಸಿಂಗ್ ಕಾಲೇಜು, ಹಾಸನ ೨) ಸರ್ಕಾರಿ ನರ್ಸಿಂಗ್ ಕಾಲೇಜು, ಹೊಳೇನರಸೀಪುರ, ಹಾಸನ ಜಿಲ್ಲೆ
ಆ)	ಉತ್ತರ ಕನ್ನಡ ಜಿಲ್ಲೆಯಲ್ಲಿ ಎಲ್ಲೆಲ್ಲಿ ನರ್ಸಿಂಗ್ ಕಾಲೇಜುಗಳು ಇವೆ ,	ಕೆ ಎಲ್ ಇ ಇನ್ಸ್ ಟ್ಯೂಟ್ ಆಫ್ ನರ್ಸಿಂಗ್ ಸೈನ್ಸ್, ಅಂಕೋಲಾ ಆರ್ ಎನ್ ಎಸ್ ಕಾಲೇಜ್ ಆಫ್ ನರ್ಸಿಂಗ್, ಮುರುಡೇಶ್ವರ

ಇ)	ಅಂಕೋಲನಾ – ಸಿರ್ಸಿ – ಯಲ್ಲಾಪುರ ತಾಲ್ಲೂಕಿನಲ್ಲಿ ಸರ್ಕಾರಿ ನರ್ಸಿಂಗ್ ಕಾಲೇಜನ್ನು ಸ್ಥಾಪಿಸಲು ಸರ್ಕಾರಕ್ಕೆ ಇರುವ ತೊಂದರೆಯೇನು,	೧) ಬೋಧಕ ಸಿಬ್ಬಂದಿಯ ಕೊರತೆ ೨) ಮೂಲಭೂತ ಸೌಕರ್ಯಗಳ ಕೊರತೆ ೩) ಬಹಳಷ್ಟು ಖಾಸಗಿ ಕಾಲೇಜುಗಳ ಆಸ್ತಿತ್ವ
ಈ)	ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಳ್ಳುವ ಕ್ರಮವೇನು?	– ಉದ್ಭವಿಸುವುದಿಲ್ಲ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೧೭೧೭ (೨೨೪೮)

ಸದಸ್ಯರ ಹೆಸರು ಶ್ರೀ ಚನ್ನಬಸವರಾಜ್ (ಅಪ್ಪಾಜಿ)
ಶಂಕರ ರಾವ್ ನಾಡಗೌಡ (ಮ----)

ಉತ್ತರಿಸುವ ಸಚಿವರು ಶ್ರೀ ಬಂಡೆಪ್ಪ ಖಾಶೆಂಪೂರ
(ಕೃಷಿ ಸಚಿವರು)

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಸಣ್ಣ ರೈತರು ಖರೀದಿಸುವ ಟ್ರಾಕ್ಟರ್ ಗಳಿಗೆ ಸರ್ಕಾರ ನೀಡುತ್ತಿರುವ ಸಹಾಯ ಧನವೆಷ್ಟು ?	ರೂ ೬೦,೦೦೦/–
ಆ)	ಯೋಜನೆಯ ಅನುಷ್ಠಾನಕ್ಕೆ ಬಂದ ನಂತರ ಒಟ್ಟು ಎಷ್ಟು ಫಲಾನುಭವಿಗಳಿಗೆ ಸಹಾಯಧನವನ್ನು ಮಂಜೂರು ಮಾಡಲಾಗಿದೆ , ಅದಕ್ಕಾಗಿ ನೀಡಿದ ಒಟ್ಟು ಹಣದ ಮೊತ್ತ ಎಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು) ,	ಈ ಯೋಜನೆ ೨೦೦೩–೦೪ ರಿಂದ ಅನುಷ್ಠಾನಕ್ಕೆ ಬಂದಿದೆ ೨೦೦೩–೦೪ ರಿಂದ ೨೦೦೬–೦೭ (ಫೆಬ್ರವರಿ ೨೦೦೭) ರ ವರೆಗಿನ ಫಲಾನುಭವಿಗಳ ಸಂಖ್ಯೆ ೫೯೫೫ ಮತ್ತು ನೀಡಿದ ಸಹಾಯಧನ ರೂ ೩೬೦೧.೨೦ ಲಕ್ಷಗಳ ವಿವರಗಳನ್ನು ಅನುಬಂಧ – ೧ ರಲ್ಲಿ